

**ಕೇಶವ ಕುಡ್ಲ**

ಕಲೆ: ಸಂತೋಷ್ ಸಸಿಹಿತ್ಲು

# ರಾಮಕ್ಕನ ನವೋದ್ಯಮವು ಬರಖಾಸ್ತಾದುದು

ಏನೂ ಕಷ್ಟಪಡದೆ ಇಷ್ಟೊಂದು ಸುಲಭವಾಗಿ, ಹೀಗೂ ಹಣ ಸಂಪಾದಿಸಬಹುದು ಎಂದು ರಾಮಕ್ಕನಿಗೆ ಅರಿವಾದದ್ದು ತೀರಾ ಅಚಾನಕ್ಕಾಗಿ, ಅದೂ ಅವಳ ಅರಿವಿಲ್ಲದೆ.

ಅದೊಂದು ಸಾಧಾರಣವಾದ ಪಟ್ಟಣವೂ ಅಲ್ಲದ, ಹಳ್ಳಿಯೂ ಅಲ್ಲದ ಆದರೆ ಕೃಷಿಯೇ ಪ್ರಧಾನವಾದ ಊರು. ಆ ಊರಿನಲ್ಲಿ ಎಲ್ಲ ಸಾಮಾನ್ಯ ಗ್ರಾಮೀಣ ಹೆಣ್ಣುಮಗಳಂತೆ ಸರಳವಾಗಿ ಸಹಜವಾಗಿ ಬದುಕಿಕೊಂಡಿದ್ದ ಅವಳಿಗೆ ಜೀವನಕ್ಕಾಗಿ ದುಡಿಯಲು ಒಂದು ಕೆಲಸವಿದೆ. ಗಂಡನು ಸೋಮಾರಿಯಾಗಿ ಮನೆಗೇನೂ ಪೈಸೆಯ ಸಹಾಯ ಮಾಡದೆ ಅಲಂಕಾರ ಮಾಡಿಕೊಂಡು ಅಲ್ಲಿಲ್ಲಿ ಅಲೆದುಕೊಂಡಿರುವಾಗ ಮನೆಯ ಲವಾಜಮೆಗೂ, ಗಂಡ ಹುಟ್ಟಿಸಿದ್ದ ಮಕ್ಕಳ ಅಗತ್ಯಗಳಿಗೂ ದುಡಿಯುವುದು ಅವಳಿಗೆ ಅನಿವಾರ್ಯವೆ ಆಗಿರುವುದರಿಂದ ಊರ ಹೊರಭಾಗದಲ್ಲಿ ಕೆರೆಯ ಜಮೀನಿನ ಒತ್ತುವರಿಯಲ್ಲಿ ಇರುವ ಭೀಮಣ್ಣನ ಇಟ್ಟಿಗೆ ಭಟ್ಟಿಗೆ ಹೋಗಿ ಇಟ್ಟಿಗೆ ಬಿಡುವ ಕೆಲಸ ಮಾಡಿಕೊಂಡಿರುತ್ತಾಳೆ.

ಭೀಮಣ್ಣ ಆ ಊರಿನಲ್ಲಿ ಹಣಕಾಸಿರುವ ಗಟ್ಟಿ ಕುಳ. ಸಾಕಷ್ಟು ಕೃಷಿ ಆದಾಯವಿದ್ದರೂ ಆತ ವಿನಾಕಾರಣ ಮೈಮೇಲೆ ಎಳೆದುಕೊಂಡಿದ್ದ ರಾಜಕೀಯದ ಹವ್ಯಾಸಗಳಿಗೆ ಹೆಚ್ಚಿನ ಹಣ ಬೇಕಾಗಿದ್ದುದರಿಂದ ಏನಾದರೂ ಹೊಸ ಆದಾಯ ಮೂಲ ಕಂಡುಕೊಳ್ಳುವ ಉಮೇದಿನಲ್ಲಿದ್ದಾಗ ಯಾರೋ ಅವನ ಜಮೀನಿನ ಒಂದು ಭಾಗದಲ್ಲಿ ಕೃಷಿಗೆ ಅಷ್ಟೇನೂ ಅನುಕೂಲವಾಗದ ಅಂಟು ಮಣ್ಣು ಇದ್ದುದನ್ನು ಗಮನಿಸಿ ಒಂದು ಇಟ್ಟಿಗೆ ಕಾರ್ಖಾನೆ ಆರಂಭಿಸಲು ಸೂಚಿಸಿದ್ದರು. ಕಾಸು ಖರ್ಚಿಲ್ಲದೆ ಕಚ್ಚಾ ಪದಾರ್ಥವು ತನ್ನ ಜಮೀನಿನಲ್ಲೆ ಸಿಕ್ಕುತ್ತದೆಂದು ಅರಿವಾದಾಗ ಭೀಮಣ್ಣ ಅದೆಲ್ಲಿಂದಲೋ ಇಟ್ಟಿಗೆ ಭಟ್ಟಿ ನಡೆಸುವ ಅನುಭವವಿದ್ದ ದೊರೆಸಾಮಿ ಎಂಬವನನ್ನು ಹಿಡಿದು ತಂದು ಇಟ್ಟಿಗೆ ಭಟ್ಟಿ ಆರಂಭಿಸಿದ್ದ. ದೊರೆಸಾಮಿಯಾದರೋ ಮನೆ ಹೆಂಡತಿ ಮಕ್ಕಳು ಇತ್ಯಾದಿ ಯಾವುದೇ ಭವಬಂಧನಗಳೂ ಇಲ್ಲದ, ಈ ಭೂಮಿಯ ಯಾವ ಮೂಲೆಯಲ್ಲೂ ಬೇರು ಬಿಡಲಾರದವನಾಗಿ ಅಲೆದುಕೊಂಡೆ ಬದುಕಿದ್ದವನು. ಭೀಮಣ್ಣನು ತನ್ನ ಬಳಿ ಕೆಲಸ ಮಾಡಲು ಕರೆದಾಗ ತನ್ನ